



ಅದೊಂದು ಅಚ್ಚರಿಯೇ.

ಜೈಸಲ್ಮೇರ್ ನಗರದಲ್ಲೂ  ನೋಡಲು ಹಲವು ಪ್ರೇಕ್ಷಣೀಯ ಸ್ಥಳಗಳಿವೆ. ರಾಜಸ್ತಾನದ ಗೋಲ್ಡನ್ ಫೋರ್ಟ್ ಎಂದೇ ಪ್ರಸಿದ್ಧಿ ಹೊಂದಿರುವ ಜೈಸಲ್ಮೇರ್ ಕೋಟೆ, ರಜಪೂತ ಅರಸರ ಆಳ್ವಿಕೆಯ ಹೆಮ್ಮೆಯ ಪ್ರತೀಕ. ಜಗತ್ತಿನ ಅತಿದೊಡ್ಡ ಕೋಟೆಗಳ ಪಟ್ಟಿಯಲ್ಲಿ ಇದರ ಹೆಸರಿದೆ. ರಾಜಸ್ತಾನಿ ಶಿಲ್ಪಕಲೆಯ ಅದ್ಭುತ ನೋಟವೂ ಇಲ್ಲಿ ಸಿಗುತ್ತದೆ.

16ನೇ ಶತಮಾನದಲ್ಲಿ ದೊರೆ ಜೈತ್‌ಸಿಂಗ್ ಕಟ್ಟಿಸಿದ ಮಹಾಭಾಗ್ ವಿಸ್ತಾರವಾದ ಉದ್ಯಾನ. ತಂದೆಯ ಮರಣಾನಂತರ ಆತನ ಮಗ ಲುನಾಕರಣ್ ಇದರ ನಿರ್ಮಾಣವನ್ನು ಪೂರ್ತಿಗೊಳಿಸಿದ ಎನ್ನುತ್ತಾರೆ. ರಾಜಮನೆತನದವರ ಸಮಾಧಿಗಳಿವೆ. ಗುಮನ್ ಚಂದ್ ಎಂಬ ಖ್ಯಾತ ವರ್ತಕ ಕಟ್ಟಿಸಿದ ಪಟ್ವೋನ್ ಕಿ ಹವೇಲಿ ನೋಡಬೇಕಾದ ಇನ್ನೊಂದು ಕಟ್ಟಡ. ಹಳದಿ ಮರಳುಕಲ್ಲಿನ ಈ ಬೃಹತ್ ಕಟ್ಟಡದಲ್ಲಿ ರಾಜಸ್ತಾನಿ ಶಿಲ್ಪಕಲೆಯ ಸೊಗಸಿದೆ.

ಥಾರ್ ಹೆರಿಟೇಜ್ ಮ್ಯೂಸಿಯಂ ನೋಡಲೇಬೇಕಾದ ಇನ್ನೊಂದು ಕೇಂದ್ರ. ಲಕ್ಷ್ಮೀನಾರಾಯಣ ಖತ್ರಿ ಅವರು ಸ್ಥಾಪಿಸಿದ ಈ ಮ್ಯೂಸಿಯಂನಲ್ಲಿ ಥಾರ್ ಮರುಭೂಮಿಯ ಇತಿಹಾಸ, ಸಂಸ್ಕೃತಿ, ಕಲೆ ಮತ್ತು ಶಿಲ್ಪಕಲೆಯನ್ನು ಪ್ರತಿಬಿಂಬಿಸುವ ವಿವರಗಳಿವೆ. ಸಹಸ್ರಾರು ವರ್ಷಗಳ ಹಿಂದಿನ ಪಳೆಯುಳಿಕೆಗಳು, ಒಂಟೆ ಮತ್ತು ಕುದುರೆಗಳು ವಿಶಿಷ್ಟ ಆಭರಣಗಳು, ಪುರಾತನ ಹಸ್ತಪ್ರತಿಗಳು ಗಮನ ಸೆಳೆಯುತ್ತವೆ.

ಆದರೆ ನಾವು ನೋಡಿದ ಸರೋವರ ಮಾತ್ರ ನಮ್ಮನ್ನು ಪ್ರವಾಸದುದ್ದಕ್ಕೂ ಕಾಡಿತು. ಅಲ್ಲಿರುವ ಮೀನುಗಳ ಸ್ವಚ್ಛಂದ ಓಡಾಟ ಮರುಭೂಮಿಯನ್ನೇ ಮರೆಸುವಂತಿದೆ.

